# ಈಶಾನ್ಯ ಭಾರತ ಕ್ರೀಡಾಶಕ್ತಿಯ ದ್ಯೋತಕ



ಮೀರಾಬಾಯಿ ಚಾನು




ಮೇರಿ ಕೋಮ್

## ಸಣ್ಣಕಣ್ಣುಗಳ ಹೆಣ್ಣುಮಕ್ಕಳ ಪದಕಬೇಟೆಯ ಸಂಕಥನ

■ ವಿಶಾಖ ಎನ್.

ಹಿಂದೆ ಒರಗಿದರೆ ಪಾತ್ರೆಗಳು ಉರುಳಬಹುದೇನೋ ಎನ್ನುವಷ್ಟು ಇಕ್ಕಟ್ಟು. ಖುಷಿಯಿಂದ ಕೈಎತ್ತಿದರೆ ಪಕ್ಕದಲ್ಲಿ ಕುಳಿತವರಿಗೆ ತಗಲುತ್ತದೆ. ಎದುರಲ್ಲಿ ಇದ್ದದ್ದು ತಾಟು. ಅದರಲ್ಲಿ ನೆಚ್ಚಿನ ದೇಸಿ ಆಹಾರ. ಈ ವರ್ಷ ಒಲಿಂಪಿಕ್ಸ್ ಶುರುವಾದದ್ದೇ ಮೊದಲ ದಿನದ ಸ್ಪರ್ಧೆಗಳ ಪಟ್ಟಿಯಲ್ಲೇ ಭಾರತಕ್ಕೊಂದು ಪದಕ. ಅದನ್ನು ದಕ್ಕಿಸಿಕೊಟ್ಟ ಮೀರಾಬಾಯಿ ಚಾನು ತಾಟಿನ ಎದುರು ಕುಳಿತಿದ್ದರು. ಎರಡು ವರ್ಷ ಹಾಗೆ ತಾಟಿನ ಮುಂದೆ ನಿಸೂರಾಗಿ ಕುಳಿತು ಅವರು ಉಣ್ಣಲು ಆಗಿರಲಿಲ್ಲ. ಒಲಿಂಪಿಕ್ಸ್ ಪದಕ ಗೆಲ್ಲುವುದು ತಮಾಷೆಯ ಮಾತೆ? ಬಸಿದ ಬೆವರೆಲ್ಲ ಬೆಳೆಯಾಗಿ, ಅವರ ಕೊರಳಿಗೆ ಬೆಳ್ಳಿ ಪದಕದ ಹೊಳಪಿನ ಹೂವು ಅಲಂಕರಿಸಿದ ಕ್ಷಣವನ್ನು ಸಂಭ್ರಮಿಸದ ಭಾರತೀಯರೇ ಇಲ್ಲವೇನೋ? ಕ್ರೀಡೆ ಅಥವಾ ಸ್ಪರ್ಧೆಯಲ್ಲಿನ ಇಂತಹ ಗೆಲುವುಗಳು ‘ಜಡಭರತ’ರಿಗೂ ಮುದಕೊಡುತ್ತವೆ.

ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಮಿಂಚು ಮೂಡಿಸಿದ ಮೇಲೆ ಹೀಗೆ ತಾಟಿನ ಮುಂದೆ ಸಣ್ಣ ಅಡುಗೆಮನೆಯಲ್ಲಿ ಊಟಕ್ಕೆ ಕುಳಿತಿದ್ದ ಚಾನು ಫೋಟೊ ವೈರಲ್ ಆಯಿತು. ಅದನ್ನು ನೋಡಿದ ಚಿತ್ರನಟ ಮಾಧವನ್ ಅವಾಕ್ಕಾದರು. ವಿಶ್ವಮಟ್ಟದ ಮಹಾ ಅಥ್ಲೀಟ್ ಮೇಳದಲ್ಲಿ ಪದಕವೊಂದನ್ನು ಗೆದ್ದುಬಂದ ದೇಶದ ಹೆಣ್ಣುಮಗಳ ಬದುಕು ಹೀಗೂ ಇರುವುದೇ ಎನ್ನುವುದು ಅವರ ಬೆರಗಿಗೆ ಕಾರಣ. ಇಂತಹುದೊಂದು ಸ್ಥಿತಿಯನ್ನು ಅವರು ಊಹಿಸಿಯೂ ಇರಲಿಲ್ಲ. ಅವರು ತಮ್ಮ ಅನಿಸಿಕೆಯನ್ನೆಲ್ಲ ಮುಕ್ತವಾಗಿ ಹೇಳಿಕೊಂಡಿದ್ದಷ್ಟೇ ಅಲ್ಲ, ನಮ್ಮ ದೇಶದಲ್ಲಿ ಕ್ರೀಡೆಗೆ ಸಿಗಬೇಕಾದ ಮರ್ಯಾದೆ ಇನ್ನೂ ದೊಡ್ಡದಿದೆ ಎಂಬ ಆರೋಗ್ಯಕರ ತಕರಾರಿನ ದನಿಯನ್ನೂ ಹೊರಡಿಸಿದರು.

2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಮೇರಿ ಕೋಮ್ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಗೆದ್ದಾಗ ಇದೇ ತರಹ ಜಗತ್ತು ಅವರತ್ತ ಬೆರಗಿನಿಂದ ನೋಡಿತ್ತು. ಬದುಕನ್ನು, ಗಂಡನನ್ನು, ಮಕ್ಕಳನ್ನು ಪ್ರೀತಿಸುತ್ತಲೇ ಬಾಕ್ಸಿಂಗ್ ಗ್ಲೌಸ್ ಕಡೆಗೂ ತಮ್ಮ ದಿಟ್ಟ ದೃಷ್ಟಿ ನೆಟ್ಟ ಅವರ ಬದುಕಿನ ಪುಟಗಳೇ ಮುದಕೊಡುತ್ತವೆ. ಅಂತಹ ಕ್ಷಣಗಳನ್ನೆಲ್ಲ ತೆರೆದಿಡುವ ಸಿನಿಮಾ ಕೂಡ ಹಿಂದಿ ಭಾಷೆಯಲ್ಲಿ ಬಂದಿದ್ದನ್ನು ನೋಡಿದ್ದೇವೆ. ಮೇರಿ ಈಶಾನ್ಯ ಭಾರತದವರು. ಚಾನು ಕೂಡ ಅದೇ ಭಾಗದವರು. ಚಾನು ಪದಕ ಗೆದ್ದ ವಾರದೊಳಗೇ ಬಾಕ್ಸಿಂಗ್‌ನಲ್ಲಿ ಕಂಚು ಗೆಲ್ಲುವ ಮೂಲಕ ದೇಶಕ್ಕೆ ಮತ್ತೊಂದು ಗರಿ ಮೂಡಿಸಿದವರು ಲವ್ಲಿನಾ ಬಾರ್ಗೋಹೈನ್.

ಅಸ್ಸಾಂನ ಬಾರಾ ಮುಖಿಯಾ ಎಂಬ ಹಳ್ಳಿಯ ಹುಡುಗಿ ಲವ್ಲಿನಾ. ಒಂಬತ್ತು ವರ್ಷಗಳ ಹಿಂದೆ ಮೇರಿ ಪದಕ ಗೆದ್ದದ್ದನ್ನು ನೋಡಿ ಅವರೊಳಗೂ ಮಹತ್ವಾಕಾಂಕ್ಷೆಯ ಹಕ್ಕಿ ರೆಕ್ಕೆ ಫಡಫಡಿಸಿತ್ತು. ಕಳೆದ ವರ್ಷ ಜುಲೈನಲ್ಲಿ ಸಹಪಾಠಿಗಳೆಲ್ಲ